೨) ಮೇಲೆ ಹೇಳಿದ ಹೋಬಳಿಗಳ, ಹಳ್ಳಿಗಳಲ್ಲಿರುವ ಜಾನುವಾರುಗಳಿಗೆ ಸಧ್ಯದಲ್ಲಿ ಮೇವಿನ ಮತ್ತು ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಮುಳಬಾಗಿಲು ತಾಲ್ಲೂಕಿನಲ್ಲಿ ಒಟ್ಟು ೬೯೦ ಕೊಳವೆ ಬಾವಿಗಳು ಕೆಲಸ ಮಾಡುತ್ತಿವೆ.

ಶಿರಾ ತಾಲ್ಲೂಕು ಕಸಬಾ ಹೋಬಳಿ ಮುಡಗೆರೆ ಗ್ರಾಮದ ತಿಮ್ಮಜ್ಜ ಕೆರೆಯ ಬಗ್ಗೆ.

೮೪೨. ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿರಾ ತಾಲ್ಲೂಕು ಕಸಬಾ ಹೋಬಳಿ ಮುಡಗೆರೆ ಗ್ರಾಮದ ಸರ್ವೆ ನಂ.೬೪ ರ ಮುಂತಾದವು ಹೆತ್ತಿರದಲ್ಲಿರುವ ತಿಮ್ಮಜ್ಜ ಕೆರೆಯನ್ನು ಉಟಾವಣೆ ಮಾಡಿಸುವುದಕ್ಕಾಗಿ ಸರ್ಕಾರ ಸ್ವಾಧೀನಪಡಿಸಿಕೊಂಡಿದೆಯೆ, ಹಾಗಿದ್ದಲ್ಲಿ, ಮೇಲ್ಕಂಡ ಜಮೀನುಗಳನ್ನು ಯಾವಾಗ ಸ್ವಾಧೀನಪಡಿಸಿಕೊಳ್ಳಲಾಯಿತು,

ಆ) ಸದರೀ ಜಮೀನುಗಳು ಯಾರ ಒಡೆತನದಲ್ಲಿವೆ ಮತ್ತು ಎಷ್ಟೆಷ್ಟು ವಿಸ್ತೀರ್ಣವನ್ನು ವಶ ಪಡಿಸಿಕೊಳ್ಳಲಾಗಿದೆ, ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳ ವಾರಸುದಾರರುಗಳಿಗೆ ಸರಕಾರ ದವರು ಪರಿಹಾರ ನೀಡುವರೆ, ಹಾಗಿದ್ದಲ್ಲಿ, ಪ್ರತಿ ಸರ್ವೆ ನಂಬರಿನ ಜಮೀನಿಗೆ ಸರ್ಕಾರದಿಂದ ನಿಗದಿ ಯಾಗುತ್ತಿರುವ ಮೊತ್ತವೆಷ್ಟು,

ಇ) ಜಮೀನು ಮಾಲೀಕರುಗಳಿಂದ ಸರ್ಕಾರಕ್ಕೆ ಸಾಕಷ್ಟು ಕೋರಿಕೆಗಳು ಬಂದಾಗ್ಯೂ ಈವರೆಗೆ ಹಣ ಪಾವತಿ ಮಾಡದೇ ಇರಲು ಕಾರಣವೇನು ಹಾಗೂ ಯಾವಾಗ ಪಾವತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಇಲ್ಲ, ಆದರೆ ಫೆಬ್ರುವರಿ ೧೯೮೦ ರಂದು ತಿಮ್ಮಜ್ಜನ ಕೆರೆಯ ಉಟಾವಣೆಯ ಸಲುವಾಗಿ ಸ.ನಂ.೬೪ ರಲ್ಲಿ ೧೩ ಎಕರೆ ೨೮ ಗುಂಟೆ ಜಮೀನನ್ನು ಲೋಕೋಪಯೋಗಿ ಇಲಾಖೆಯು ಉಪಯೋಗಿಸಿ ಕೊಂಡಿದೆ.

ಆ) ಸದರಿ ಜಮೀನು ಲೋಕೋಪಯೋಗಿ ಇಲಾಖೆಯ ಒಡೆತನದಲ್ಲಿದೆ. ಸಂಬಂಧಪಟ್ಟ ಭೂ ಮಾಲೀಕರಿಗೆ ಭೂಸ್ವಾಧೀನದ ನಡೆವಳಿಕೆಯು ಪೂರ್ಣಗೊಂಡ ನಂತರ ಪರಿಹಾರ ಪಾವತಿ ಮಾಡಲಾಗುವುದು. ಭೂಸ್ವಾಧೀನ ಕಾಯ್ದೆಯ ಪ್ರಕಾರ ಪರಿಹಾರ ಹಣವನ್ನು ನೀಡಲಾಗುವುದು. ಐತೀರ್ಪು ಆನುಮೋದನೆಗೊಂಡ ನಂತರ ಪ್ರತಿ ಸ.ನಂ. ಗೂ ಪರಿಹಾರ ಮೊತ್ತವು ಗೊತ್ತಾಗುವುದು.

ಇ) ಭೂಸ್ವಾಧೀನ ನಡೆವಳಿಕೆಯು ಪೂರ್ಣಗೊಂಡ ನಂತರ ಪರಿಹಾರ ಪಾವತಿ ಮಾಡ ಲಾಗುವುದು.

ನರಸಿಂಹರಾಜಪುರ ತಾಲ್ಲೂಕು ಬಿ.ಕಣಬೂರು ಗ್ರಾಮದಲ್ಲಿ ಕಾನೂನು ಬಾಹಿರವಾಗಿ ನಿವೇಶನ ಹಂಚಿರುವ ಬಗ್ಗೆ.

೧೧೦೪. ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯಕಂದಾಯ, ಯೋಜನಾ ಮತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನರಸಿಂಹರಾಜಪುರ ತಾಲ್ಲೂಕು ಬಿ.ಕಣಬೂರು ಗ್ರಾಮಕ್ಕೆ ಸೇರಿದ ಸರ್ವೆ ನಂ.೧೦೫ ಮತ್ತು ೧೨೭ ಬನ್ನೂರು ೮೫, ಹಲಸೂರು ೯೬ ಮಂತ್ರ ೪೫ ರಲ್ಲಿ ಇರುವ ಜಮೀನು ಅರಣ್ಯ ಇಲಾಖೆಗೆ ಸೇರಿ ದ್ದರೂ ಸದರಿ ಜಮೀನನ್ನು ನಿವೇಶನಗಳನ್ನಾಗಿ ಪಂಗಡಿಸಿ ದಿನಾಂಕ ೨-೧೧-೮೬ ರಂದು ೨೫೭ ಮನೆ ನಿವೇಶನದ ಹಕ್ಕು ಪತ್ರ ವಿತರಣೆ ಮಾಡಿರುವುದು ನಿಜವೇ,

ಆ) ಈ ಬಗ್ಗೆ ಕೊಪ್ಪದಲ್ಲಿರುವ ಜಿಲ್ಲಾ ಅರಣ್ಯ ಅಧಿಕಾರಿ ಈ ನಿವೇಶನ ಹಂಚಿರುವ ಸ್ಥಳ ಅರಣ್ಯ ಇಲಾಖೆಗೆ ಸೇರಿರುವುದರಿಂದ ಹಕ್ಕು ಪತ್ರ ಕೊಟ್ಟಿರುವುದು ಊರ್ಜಿತ ಆಗುವುದಿಲ್ಲವೆಂದು ಪತ್ರಿಕಾ ಹೇಳಿಕೆ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಇ) ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸಾರ್ವಜನಿಕರಿಂದ ತಕರಾರು ಬಂದಿದೆಯೇ, ಹಾಗಿದ್ದಲ್ಲಿ ಈ ಕಾನೂನು ಬಾಹಿರ ಕ್ರಮದ ಬಗ್ಗೆ ಈವರೆಗೆ ಸಂಬಂಧಪಟ್ಟ ಅಧಿಕಾರಿಗಳು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು) —

ಅ) ಹೌದು. ಸರ್ವೆ ನಂ. ೧೨೭ ಅರಣ್ಯ ಭೂಮಿಯಲ್ಲಿ ಇದು ಗೋಮಾಳವಾಗಿದ್ದು ಕಂದಾಯ ಇಲಾಖೆಗೆ ಸೇರಿದ್ದಾಗಿರುತ್ತದೆ.

ಆ) – ಹೌದು –

ಇ) ಅಂತಹ ತಕರಾರು ಅರ್ಜಿಗಳು ಸಾರ್ವಜನಿಕರಿಂದ ಜಿಲ್ಲಾಧಿಕಾರಿಯಂವರಿಗೆ ಬಂದಿಲ್ಲ.

ಬರಗಾಲ ಪರಿಹಾರದ ಬಗ್ಗೆ

೧೧೬೪. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).— ಮಾನ್ಯ ಕಂದಾಯ, ಯೋಜನಾ ಹಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈಗ್ಗೆ ಐದು–ಆರು ವರ್ಷಗಳಿಂದಲೂ ರಾಜ್ಯದ ಒಂದಲ್ಲ ಒಂದು ಕಡೆ ಬರಗಾಲಕ್ಕೆ ತುತ್ತಾಗುತ್ತಿರುವುದು ನಿಜವಲ್ಲವೇ ?

ಆ) ೧೯೮೬–೮೭ ರಲ್ಲಿ ಜಾನುವಾರುಗಳಿಗೆ ಮೇವು ಒದಗಿಸಲು ಸರ್ಕಾರದವರು ಏವು ಕ್ರಮ ಕೈಗೊಂಡಿದ್ದಾರೆ ?

ಇ) ಪ್ರತಿ ಹೋಬಳಿಯಲ್ಲಿ ನೂರು ಎಕರೆ ಸರ್ಕಾರಿ ಜಮೀನಿನಲ್ಲಿ ಮೇವು ಬೆಳೆಯನ್ನು ಬೆಳೆಯಂವುದು ಸೂಕ್ತವಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು). —

ಅ) ಹೌದು.

ಆ) ಜಾನುವಾರುಗಳಿಗೆ ಮೇವು ಒದಗಿಸುವ ಸಲುವಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧. ರಾಜ್ಯದ ಒಳಗೆ ಹಾಗೂ ಹೊರಗೆ ಲಭ್ಯವಿರುವ ಸ್ಥಳಗಳಿಂದ ಮೇವಿನ ಸಂಗ್ರಹಣೆ, ಸಾಗಣೆ ಹಾಗೂ ಸರಬರಾಜು ಮಾಡಲಾಯಿತು.

೨. ವಿಶೇಷ ನೀರಾವರಿ ವ್ಯವಸ್ಥೆಯಿಂದ ತೀವ್ರ ಮೇವಿನ ಬೆಳೆಯನ್ನು ಬೆಳೆಸಲಾಯಿತು.

೩. ಗೋಶಾಲೆಗಳು ಮತ್ತು ಮೇವು ದಾಸ್ತಾನು ಬ್ಯಾಂಕುಗಳನ್ನು (ಫಾಡರ್ ಬ್ಯಾಂಕ್) ಸ್ಥಾಪಿಸಲಾಯಿತು.

೪. ಈಗಲೂ ಮೇವು ಅಭಾವವಿರುವ ಕಡೆಗಳಲ್ಲಿ ಗೋಶಾಲೆಗಳನ್ನು ಮುಂದುವರಿಸಿಕೊಂಡು ಬರಲಾಗಿದೆ.

ಇ) ಈ ಬಾರಿ ಮುಂಗಾರು ಮತ್ತು ಹಿಂಗಾರು ಮಳೆಯು ಬಹುತೇಕ ಚೆನ್ನಾಗಿ ಬಿದ್ದಿದ್ದ ಕಾರಣವಾಗಿ ಮೇವಿನ ಪರಿಸ್ಥಿತಿಯು ಉತ್ತಮಗೊಂಡಿದ್ದರಿಂದ, ಈ ಅವಶ್ಯಕತೆ ಸದ್ಯಕ್ಕೆ ಕಂಡು ಬರುವುದಿಲ್ಲ.